# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 211 |
| ಸದಸ್ಯರ ಹೆಸರು | ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 14.12.2021 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಉಡುಪಿ ಜಿಲ್ಲೆಯಲ್ಲಿರುವ ವಿವಿಧ ಗಣಿಗಾರಿಕೆಗಳು ಯಾವುವು; ಕಳೆದ ಮೂರು ವರ್ಷಗಳಲ್ಲಿ ಸಂಗ್ರಹಿಸಲಾದ ರಾಜಧನವೆಷ್ಟು; ಅವುಗಳಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಪಾವತಿಸಬೇಕಾದ ಮೊತ್ತವೆಷ್ಟು; ಪಾವತಿಸಿದ ಮತ್ತು ಪಾವತಿಸಲು ಬಾಕಿಯಿರುವ ಮೊತ್ತವೆಷ್ಟು</td><td>
➢ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಕಟ್ಟಡ ಕಲ್ಲು, (ಜಲ್ಲಿ ಮತ್ತು ಕೆಂಪುಕಲ್ಲು), ಸಾಧಾರಣ ಮರಳು, ಅಲಂಕಾರಿಕ ಶಿಲೆ, ಜೇಡಿಮಣ್ಣು, ಮತ್ತು ಸಿಲಿಕಾ ಮರಳು ಸೇರಿದಂತೆ ಒಟ್ಟು 136 ಗಣಿಗಾರಿಕೆ ಪರವಾನಗಿಗಳನ್ನು ಮಂಜೂರು ಮಾಡಲಾಗಿರುತ್ತದೆ.<br>ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br><br>
➢ ಕಳೆದ ಮೂರು ವರ್ಷಗಳಲ್ಲಿ ಸದರಿ ಉಪಖನಿಜಗಳ ಗಣಿಗಾರಿಕೆಯಿಂದ ಸಂಗ್ರಹವಾದ ರಾಜಧನದ ವಿವರ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಸಂಗ್ರಹಿಸಲಾದ ರಾಜಧನ (ಲಕ್ಷಗಳಲ್ಲಿ)</th></tr>
<tr><td>2018-19</td><td>1589.70</td></tr>
<tr><td>2019-20</td><td>2312.53</td></tr>
<tr><td>2020-21</td><td>2725.25</td></tr>
<tr><td>2021-22 (ಅಕ್ಟೋಬರ್ ಅಂತ್ಯಕ್ಕೆ)</td><td>1100.04</td></tr>
</table>
➢ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 31-R (7) ರಂತೆ ಮರಳುಗಾರಿಕೆಯಿಂದ ಸಂಗ್ರಹವಾದ ರಾಜಧನದ ಶೇ. 25 ರಷ್ಟು ಮೊತ್ತವನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ನೀಡಲು ಇರುವ ಅವಕಾಶದನ್ವಯ 2018-19 ನೇ ಸಾಲಿನಲ್ಲಿ 1.91 ರೂ. ಲಕ್ಷಗಳು ಹಾಗೂ 2019-20 ನೇ ಸಾಲಿನಲ್ಲಿ 71.56 ರೂ.ಲಕ್ಷಗಳು ಈಗಾಗಲೇ ಆರ್ಥಿಕ ಇಲಾಖೆಯಿಂದ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.<br>
➢ 2020-21ನೇ ಸಾಲಿನಲ್ಲಿ 111.00 ರೂ.ಲಕ್ಷಗಳ ಮೊತ್ತವನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಗೊಳಿಸಲು ಪರಿಶೀಲಿಸಲಾಗುತ್ತಿದೆ.
</td></tr>
</table>